ಬೀದರ್	233.00
ರಾಯಚೂರು	319.00
ಕೊಪ್ಪಳ	171.00
ಬಳ್ಳಾರಿ	200.00
ಬೆಳಗಾಂ	100.00
ಬಿಜಾಪುರ	430.00
ಬಾಗಲಕೋಟೆ	110.00
ಧಾರವಾಡ	110.00
ಗದಗ	119.00
ಹಾವೇರಿ	60.00
ಉತ್ತರ ಕನ್ನಡ	136.00
ಸಣ್ಣ ನೀರಾವರಿ ಇಲಾಖೆ	400.00
ಲೋಕೋಪಯೋಗಿ ಇಲಾಖೆ	400.00
ಆರೋಗ್ಯ ಇಲಾಖೆ	400.00
ಒಟ್ಟು	4498.00

ಅಂತರ್ ರಾಜ್ಯ ಬಸ್ ಪರವಾನಗಿ

2812: (3823)

ಶ್ರೀ ಎಸ್.ರಾಜೇಂದ್ರನ್ (ಕೆ.ಜಿ.ಎಫ್): ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳೆದ ಮೂರು ವರ್ಷಗಳಲ್ಲಿ ಎಷ್ಟು ಅಂತರ ರಾಜ್ಯ ಬಸ್ ಪರವಾನಗಿಯನ್ನು

ನೀಡಲಾಗಿದೆ;

ಅ) ಅವುಗಳಲ್ಲಿ ಎಷ್ಟು ಪರವಾನಗಿಗಳನ್ನು ಪರಿಶಿಷ್ಟ ಜಾತಿ: ಪರಿಶಿಷ್ಟ ಪಂಗಡ ಮತ್ತು ಅಲ್ಪ ಸಂಖ್ಯಾತರುಗಳಿಗೆ ನೀಡಲಾಗಿದೆ?

ಶ್ರೀ ಪಿ. ಜಿ. ಆರ್. ಸಿಂಧ್ಯ (ಸಾರಿಗೆ ಸಚಿವರು):

ಅ) ಕಳೆದ ಮೂರು ವರ್ಷಗಳಲ್ಲಿ ಈ ಕೆಳಗೆ ಸೂಚಿಸಿರುವಂತೆ ಅಂತರ ರಾಜ್ಯ ಬಸ್ ಪರವಾನಗಿಗಳನ್ನು ನೀಡಲಾಗಿದೆ. (ಖಾಸಗೀ ಮತ್ತು ಸರ್ಕಾರೀ ಸ್ವಾಮ್ಯ ಸಂಸ್ಥೆಗಳು)

1995-96	139
1996-97	85
1997-98	80

ಅ) ಅಂತರರಾಜ್ಯ ಬಸ್ ಪರ್ಮಿಟ್ ಮಂಜೂರಾತಿಗಾಗಿ ಪರಿಶಿಷ್ಟ ಜಾತಿ: ಪರಿಶಿಷ್ಟ ಪಂಗಡಗಳಿಗೆ ಸೇರಿದವರು ಯಾರು ಅರ್ಜಿ ಸಲ್ಲಿಸಿರುವುದಿಲ್ಲ.

ಭಟ್ಕಳ ಹಾಗೂ ಹೊನ್ನಾವರ ತಾಲ್ಲೂಕುಗಳ ಜಮೀನು ಪಟ್ಟಾ.

2814: (3743)

ಶ್ರೀ ಶಿವಾನಂದ ನಾಯ್ಕ್ (ಭಟ್ಕಳ): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಭಟ್ಕಳ ಕಂದಾಯ ವಿಭಾಗದಲ್ಲಿ (ಭಟ್ಕಳ ಹಾಗೂ ಹೊನ್ನಾವರ ತಾಲ್ಲೂಕು) ಕಳೆದ ಐದು ವರ್ಷಗಳಲ್ಲಿ ಹೊಸದಾಗಿ ಮಂಜೂರು ಮಾಡಲಾಗಿರುವ ಜಮೀನು ಪಟ್ಟಾ ಪ್ರಕರಣಗಳೆಷ್ಟು; (ಸರ್ವೆ ನಂ. ಹಾಗೂ ಹೆಸರು, ಗಾತ್ರ ಸಹಿತ ವಿವರ ನೀಡುವುದು)

ಆ) ಈ ರೀತಿ ಮಂಜೂರು ಮಾಡಲಾಗಿರುವ ಪ್ರಕರಣಗಳಲ್ಲಿ ಕಂದಾಯ ಜಮೀನು, ಅರಣ್ಯ ಜಮೀನು (ಟ್ರಿಬ್ಯೂನಲ್, ಅತಿಕ್ರಮಣ ಸಕ್ರಮಣ ಸಹಿತ) ಎಷ್ಟು?

ಇ) ಈ ರೀತಿಯ ಮಂಜೂರಾದ ಪ್ರಕರಣಗಳಲ್ಲಿ ಎಷ್ಟು ಪ್ರಕರಣಗಳಲ್ಲಿ ಸರಿಯಾದ ಕ್ರಮಗಳನ್ನು ಕೈಗೊಳ್ಳಲಾಗಿದೆ ಹಾಗೂ ಎಷ್ಟು ಮೇಲಾಧಿಕಾರಿಗಳನ್ನು ತನಿಖೆಗೆ ಒಳಪಡಿಸಲಾಗಿದೆ;